**<u>ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.</u>**

**<u>ಸಿ. ಸಿ. ನಂಬರಃ 3024/2024</u>**

**ಫಿರ್ಯಾದುದಾರರು** ದಿ. ಜನತಾ ಕೋ–ಅಪರೇಟಿವ್ ಕ್ರೆಡಿಟ್ ಸೊಸೈಟಿ, ಲಿಮಿಟೆಡ್,
ಕಾರ್‌ಸ್ಟ್ರೀಟ್, ಭಟ್ಕಳ, ಪ್ರತಿನಿಧಿಸುವವರು,
ಪ್ರಭಾರ ಶಾಖಾ ವ್ಯವಸ್ಥಾಪಕರು,
ಶ್ರೀ ವಿನೋದ ತಂದೆಃ ಮಂಜುನಾಥ ನಾಯ್ಕ,

**– ವಿರುದ್ಧ –**

**ಆರೋಪಿತರು** ನೂರುಲ್ಲಾಮೀನ್ ಶಬ್ಬೀರ್ ರೊಡ್ಡ,

**<u>ಭಾರತೀಯ ನ್ಯಾಯ ಸಂಹಿತೆ ಕಲಂ.351 ರ ಅಡಿಯಲ್ಲಿ ಆರೋಪಿಯ ಹೇಳಿಕೆಃ–</u>**

ಪ್ರಶ್ನೆ–1 : ಈ ಪ್ರಕರಣದಲ್ಲಿ ಪಿರ್ಯಾದುದಾರ ಸಾಕ್ಷಿದಾರರು ನುಡಿದ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರ : ಹೌದು

ಪ್ರಶ್ನೆ–2 : ಚಾಸಾ–1/ಫ್ರಾಸಾ–1 ವಿನೋದ ಮಂಜುನಾಥ ನಾಯ್ಕ ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ದಿನಾಂಕಃ 30–05–2022 ರಂದು ಪಿರ್ಯಾದಿ ಸಂಸ್ಥೆಯಿಂದ ರೂ.1,00,000/– (ರೂಪಾಯಿ ಒಂದು ಲಕ್ಷ ಮಾತ್ರ) ಹಣವನ್ನು ಕ್ಯಾಶ್ ಕ್ರೆಡಿಟ್ ಸಾಲವಾಗಿ ಸಾಲದ ಖಾತೆ ಸಂಖ್ಯೆಃಸಿ.ಸಿ. 1364 ರಲ್ಲಿ ವಾರ್ಷಿಕ ಶೇಕಡಾ 15% ಬಡ್ಡಿ ಮತ್ತು ದಂಡದ ಬಡ್ಡಿ 2% ದರದಲ್ಲಿ ಪಡೆದುಕೊಂಡಿದ್ದು ಇರುತ್ತದೆ. ಸದ್ರಿ ಸಾಲವನ್ನು ನಿಗಧಿತ ಅವಧಿಯಲ್ಲಿ ಪಾವತಿ ಮಾಡುವುದಾಗಿ ಒಪ್ಪಿಕೊಂಡು ಪಿರ್ಯಾದಿ ಸಂಸ್ಥೆಗೆ ಕೆಲವೊಂದು ಕಾಗದ ಪತ್ರವನ್ನು ಬರೆದುಕೊಟ್ಟಿದ್ದು ಇರುತ್ತದೆ. ಹೀಗೆ ಸಾಲ ಪಡೆಯುವಾಗ ಒಪ್ಪಿಕೊಂಡ ಪ್ರಕಾರ ನೀವು ಸಾಲವನ್ನು ಮರುಪಾವತಿ ಮಾಡದೇ ಸದ್ರಿ ಸಾಲವು ಕಟ್ ಬಾಕಿಯಾಗಿರುತ್ತದೆ ಎಂದು ಈ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : ಸುಳ್ಳು

ಪ್ರಶ್ನೆ–3 : ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 15–10–2024 ರ ವರೆಗೆ ರೂ. 1,31,000/– (ರೂಪಾಯಿ ಒಂದು ಲಕ್ಷದ ಮೂವತ್ತೊಂದು ಸಾವಿರ ಮಾತ್ರ) ಕಟ್ ಬಾಕಿ ಇದ್ದು, ನಂತರ ಸದ್ರಿ ಸಾಲದ ಹಣವನ್ನು ಮರುಪಾವತಿ ಮಾಡುವಂತೆ ಪಿರ್ಯಾದಿಯವರು ನಿಮ್ಮಲ್ಲಿ ಕೇಳಿಕೊಂಡಾಗ, ಸದ್ರಿ ಸಾಲವನ್ನು ಮರುಪಾವತಿ ಮಾಡುವ ಸಲುವಾಗಿ ನೀವು ಬ್ಯಾಂಕ್ ಆಫ್ ಬರೋಡ, ಭಟ್ಕಳ ಶಾಖೆಯ ಚೆಕ್ ನಂಬರ್ 000038 ನ್ನು ರೂ. 1,31,000/– (ರೂಪಾಯಿ ಒಂದು ಲಕ್ಷದ ಮೂವತ್ತೊಂದು ಸಾವಿರ ಮಾತ್ರ)ಕ್ಕೆ ದಿನಾಂಕಃ 15–10–2024 ಎಂದು ನಮೂದಿಸಿ ಚೆಕ್ ನ್ನು ನಿಪಿ–2 ರಂತೆ ಫಿರ್ಯಾದಿದಾರರಿಗೆ ನೀಡಿರುತ್ತೀರಿ ಎಂದು ಈ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : ಸುಳ್ಳು

ಪ್ರಶ್ನೆ-4 : ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದ್ರಿ ಚೆಕ್ಕನ್ನು ಫಿರ್ಯಾದಿ ಸೊಸೈಟಿಯವರು ಅವರ ವ್ಯವಹಾರದ ಬ್ಯಾಂಕಾದ ದಿ. ಭಟ್ಕಳ ಅರ್ಬನ್ ಕೋ-ಅಪರೇಟಿವ್ ಬ್ಯಾಂಕ್, ಭಟ್ಕಳ ಮುಖ್ಯ ಶಾಖೆಯಲ್ಲಿ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ,"Funds Insufficient" ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ನಿಪಿ-3 ರಂತೆ ದಿನಾಂಕಃ 18-10-2024 ರಂದು ವಾಪಸ್ಸು ಬಂದಿರುತ್ತದೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : ಸುಳ್ಳು

ಪ್ರಶ್ನೆ-5 : ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಫಿರ್ಯಾದಿದಾರರು ದಿನಾಂಕಃ 08-11-2024 ರಂದು ತಮ್ಮ ವಕೀಲರ ಮೂಲಕ ಲೀಗಲ್ ನೋಟಿಸನ್ನು ನಿಪಿ-4 ರಂತೆ ರಿಜಿಸ್ಟರ್ ಅಂಚೆ ಮುಖಾಂತರ ನಿಮಗೆ ಕಳುಹಿಸಿದ್ದು, ಸದ್ರಿ ಚೆಕ್ಕಿನಲ್ಲಿ ನಮೂದಿಸಿರುವ ಹಣವನ್ನು ನೋಟಿಸು ತಲುಪಿದ 15 ದಿನಗಳೊಳಗೆ ಮರು ಮಾಡುವಂತೆ ತಿಳಿಸಿದ್ದು, ಸದ್ರಿ ನೋಟಿಸ್ಸನ್ನು ನೀವು ಸ್ವೀಕರಿಸದೇ ದಿನಾಂಕಃ 13-11-2024 ರಂದು Return to Sendery ಎಂದು ನಿಪಿ-6 ರಂತೆ ವಾಪಾಸ್ಸು ಬಂದಿರುತ್ತದೆ. ಆದರೆ ಇಂದಿನವರೆಗೂ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಈ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : ಸುಳ್ಳು

ಪ್ರಶ್ನೆ-6 : ಈ ಮೊಕದ್ದಮೆಯಲ್ಲಿ ನೀವು ಬೇರೆ ಏನಾದರೂ ಹೇಳುವುದು ಇದೆಯಾ?

ಉತ್ತರ : ಇಲ್ಲ

ಪ್ರಶ್ನೆ-7 : ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಅಥವಾ ಹಾಜರುಪಡಿಸಲು ದಾಖಲೆಗಳು ಏನಾದರೂ ಇದೆಯಾ?

ಉತ್ತರ : ಇದೆ.

(ಸಾಕ್ಷಿದಾರರ ಸಾಕ್ಷ್ಯವನ್ನು ಸಂಕ್ಷಿಪ್ತಗೊಳಿಸಿ ಆರೋಪಿತನಿಗೆ ತಿಳಿದಿರುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಲಾಗಿ ಸದ್ರಿ ಆರೋಪಿ ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಲಾಗಿದೆ.)

**ಸಹಿ ಇದೆ/-**

**(ಶ್ರೀಮತಿ.ಧನವತಿ)**
ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ
ದಂಡಾಧಿಕಾರಿ, ಭಟ್ಕಳ.

ದಿನಾಂಕಃ 05-01-2026.